ಸಾಪ್ತಾಹಿಕ
# ಉದಯವಾಣಿ
Regd. No. KRN R I    UDAYAVANI — KANNADA SAPTHAHIKA — MANIPAL    ಪುಟಗಳು: 10 +4 ಪುರವಣಿ
RNI No. 17179/70
ಸಂಪುಟ: 17   ಸಂಚಿಕೆ: 7    ಮಣಿಪಾಲ, ರವಿವಾರ, ಜೂನ್ 14, 1992    ಬೆಲೆ: ರೂ. 2–10



# ಅದೃಷ್ಟದ ದಾರಿಗಳು

ವಾರದ ಕತೆ

ಮಲಯಾಳಂ ಮೂಲ: ● ಇ. ಹರಿಕುಮಾರ್
ಕನ್ನಡಕ್ಕೆ: ● ಡಾ। ಅಶೋಕ ಕುಮಾರ್

**ಆತ** ಅಲ್ಲಿ ಕಾದುನಿಲ್ಲಲಾರಂಭಿಸಿ ಎಷ್ಟು ಹೊತ್ತಾಯಿತು ಎಂದು ತಿಳಿಯದು. ನಾನು ಬಾಗಿಲು ತೆರೆದು ಹೊರಗೆ ಕಾಲಿಟ್ಟಾಗ ಅಲ್ಲಿದ್ದ. ಗೋಡೆಯಾಚೆ ದಾರಿಯಲ್ಲಿ. ನನಗೆ ಆತನ ತಲೆ ಮಾತ್ರವೆ ಕಾಣುತ್ತಿತ್ತು. ವಿವಶತೆ ತುಂಬಿದ ಮುಖವೂ, ನನ್ನನ್ನು ಕಂಡಾಗ ಆತ ಕೈಯಲ್ಲಿದ್ದ ಲಾಟರಿ ಟಿಕೆಟ್‌ಗಳನ್ನು ಎತ್ತಿ ತೋರಿಸಿದ.

ಸಾರ್ ಒಂದು ಟಿಕೆಟ್ ತಗೋಳಿ.

ಆತ ಬಳಲಿದ್ದನಾದರೂ ನಿರೀಕ್ಷಾಭರಿತವಾದ ದನಿಯಲ್ಲಿ ಕೇಳಿದ. ನಾನು ಲಾಟರಿ ಟಿಕೆಟ್ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಹೇಳಿದೆ.

ನನಗೆ ಬೇಡ.

ಸಾರ್ ಒಂದು ಟಿಕೆಟ್ ತಗೊಳ್ಳಿ. ಕೇವಲ ಐದು ರೂಪಾಯಿ. ಸಿಕ್ಕಿದರೆ ಒಂಬತ್ತು ಲಕ್ಷ ಸಾರ್.

ಲೋ ಲಕ್ಷಗಳೇನೂ ನನ್ನ ಹಣೆಯಲ್ಲಿ ಬರೆದಿಲ್ಲ. ಇಪ್ಪತ್ನಾಲ್ಕು ಗಂಟೆಗಳೂ ಕಠಿನ ದುಡಿಮೆ ಮಾಡಿ ಎರಡು ಹೊತ್ತು ಗಂಜಿ ಕುಡಿಯುವುದಕ್ಕೆ ವಿಧಿಸಲ್ಪಟ್ಟವನು ನಾನು. ನೀನು ಆ ಟಿಕೆಟನ್ನು ತೆಗೆದುಕೊಂಡು ಹೋಗಿ ಬೇರೆ ಯಾರಾದರೂ ಅದೃಷ್ಟವಂತರಿಗೆ ಕೊಡು.

ಅಲ್ಲ ಸಾರ್, ಅದೃಷ್ಟ ಬರುವುದು ಯಾವಾಗ ಎಂದು ತಿಳಿಯದು. ಸಾರ್ ಒಂದು ಟಿಕೆಟ್ ತಗೊಂಡು ಅದೃಷ್ಟ ಪರೀಕ್ಷಿಸಿ ನೋಡಿ.

ನನಗೆ ಬೇಡ.

ಸಾರ್...

ನನಗೆ ಬೇಡ ಅಂತ ಹೇಳಲಿಲ್ವ. ನೀನು ಹೋಗ್ತೀಯೋ ಇಲ್ವೋ?

ಗೋಡೆಯ ಆಚೆಯ ಮುಖ ಮಂಕಾಯಿತು. ಟಿಕೆಟ್ ಎತ್ತಿ ಹಿಡಿದ ಕೈ ತಗ್ಗಿಸಿ, ಆತ ಹೋಗಲು ತಯಾರಾದ. ಆಗಲೇ ನಾನದನ್ನು ಗಮನಿಸಿದ್ದು. ಆತ ಊರುಗೋಲಿನ ಸಹಾಯದಿಂದ ನಡೆಯುತ್ತಿದ್ದ. ಗೋಡೆಯಾಚೆ ಆತನ ತಲೆ ತಗ್ಗುತ್ತ ಏಳುತ್ತ ಸಾಗುವುದನ್ನು ನಾನು ನೋಡಿದೆ. ಗೇಟಿನ ಹತ್ತಿರ ಹೋದಾಗ ಸರಿಯಾಗಿ ಕಾಣಿಸಿತು. ಆತನಿಗೆ ಒಂದು ಕಾಲಿರಲಿಲ್ಲ. ಬಲಗಾಲು ಮಂಡಿಯ ಕೆಳಗೆ ಇರಲಿಲ್ಲ.

ಇದು ಗೊತ್ತಾಗಲಿಲ್ಲ. ಒಂದು ಟಿಕೆಟ್ ತೆಗೆದುಕೊಳ್ಳಬಹುದಿತ್ತು. ಈಗಲೂ ಬೇಕಾದರೆ ಹಾಗೆ ಮಾಡಬಹುದು. ಒಂದು ಚಪ್ಪಾಳೆ ಹಾಕಿ ಕರೆದರೆ ಆತ ನಿಲ್ಲುತ್ತಾನೆ. ಆದರೆ, ನಾನು ಅದಕ್ಕೆ ಯತ್ನಿಸಲಿಲ್ಲ. ನನ್ನ ಅದೃಷ್ಟಹೀನತೆಯ ನಿರಂತರ ಸಹವಾಸ ಮನಸ್ಸನ್ನು ನಿರ್ವಿಕಾರವಾಗಿಸಿತ್ತು. ಮನದಲ್ಲಿನ ಆರ್ದ್ರತೆಯ ಒರತೆಗಳು ಬತ್ತಿಬರಡಾಗಿದ್ದವು. ಉಳಿದಿರುವುದು ನಿಸ್ಸಂಗತೆಯ ಮರಳುಕಣಗಳು ಮಾತ್ರ.

ಆಫೀಸ್ ಮತ್ತು ಗೋಡೌನ್ ಒಂದೇ. ಗೋಡೌನಿನ ಒಂದು ಮೂಲೆಯಲ್ಲಿ ಕಾರ್ಡ್‌ಬೋರ್ಡ್‌ನಿಂದ ಮರೆ ಮಾಡಿದ ಒಂದು ಸಣ್ಣ ಕ್ಯಾಬಿನ್ನೇ ಆಫೀಸ್. ಅದರಲ್ಲಿ ಧೂಳು ಹಿಡಿದ ಮೇಜಿನ ಎದುರು ಕಾಗದದ ರಾಶಿಗಳ ಮಧ್ಯೆ ನಾನು ಕುಳಿತೆ. ಸಹಾಯಕ್ಕೆ ಒಬ್ಬ ಪ್ಯೂನ್ ಮಾತ್ರ. ಮುಂಬಯಿಯ ಒಂದು ಟ್ರಾನ್ಸ್‌ಪೋರ್ಟ್ ಕಂಪೆನಿಯ ಮ್ಯಾನೇಜರ್ ಎಂದು ನನ್ನನ್ನು 'ಎರ್ನಾಕುಳಂ'ಗೆ ವರ್ಗಾಯಿಸಿದಾಗ ಆದ ಒಪ್ಪಂದ ಅದು. ಸಂಬಳದಲ್ಲಿ ವ್ಯತ್ಯಾಸವಿಲ್ಲ. 'ಸ್ಟಾಫ್'ನ್ನೇನೂ ನೇಮಿಸುವುದಿಲ್ಲ. ಬಿಸಿನೆಸ್ ಹೇಗಿದೆ ಎಂದು ನೋಡಿದ ಬಳಿಕ ಸಂಬಳ ಹೆಚ್ಚಿಸುತ್ತೇವೆ. ಒಂದು ಸ್ಕೂಟರ್ ಕೊಡಿಸುತ್ತೇವೆ. ಒಬ್ಬಿಬ್ಬರು ಕೆಲಸಗಾರರನ್ನೂ [illegible]ಸುತ್ತೇವೆ. ಸದ್ಯಕ್ಕೆ ಅಲ್ಲಿ ಹೋಗಿ ಜಾಯಿನ್ ಆಗು. ಬಿ[illegible]ದ ಆ ಸಣ್ಣ ಪಟ್ಟಣದಲ್ಲಿ ಕಡಲೆಬಿಟ್ಟನ್ನು ಹುರಿದು ಮುದ್ದೆಮಾಡಿಕೊಂಡು ಹಸಿಮೆಣಸಿನಕಾಯಿ ನಂಜಿಕೊಂಡು ತಿನ್ನುತ್ತಿದ್ದ ನಾನು ತತ್‌ಕ್ಷಣ ಒಪ್ಪಿದೆ. ಏನಿಲ್ಲವಾದರೂ ಹುಟ್ಟಿದ ಊರಿನಲ್ಲಿರುತ್ತೇನಲ್ಲ. ಬಿಸಿನೆಸ್ ಹಿಡಿಯಲೂ ಹೆಚ್ಚು ಕಷ್ಟವಾಗದು. ಒಂದು ವರ್ಷದೊಳಗೆ ಸಾಮಾನ್ಯ ರೀತಿಯ ಬಿಸಿನೆಸ್ ಸಿಕ್ಕಿದರೆ ಒಂದು ಸಣ್ಣಮನೆ ಬಾಡಿಗೆಗೆ ತೆಗೆದುಕೊಳ್ಳಬಹುದು. ತಡವಾಗಿಯಾದರೂ ಒಂದು ಮದುವೆ ಅಂತ ಆಗಬಹುದು ಎಂದೆಲ್ಲ ನನ್ನ ಎಣಿಕೆಯಾಗಿತ್ತು.

ಎಣಿಕೆಗಳೆಲ್ಲ ತಪ್ಪಾದವೆಂದು ಆರು ತಿಂಗಳೊಳಗೆ ಅರಿವಾಯಿತು. ಇಂತಹ ಒಪ್ಪಂದದಲ್ಲಿ ವರ್ಗ ಸಿಕ್ಕಿತೆಂದು ಕೇಳಿದವರೆಲ್ಲ ಮೂಗಿನ ಮೇಲೆ ಬೆರಳಿಟ್ಟರು. ಇಲ್ಲಿರುವ ಟ್ರಾನ್ಸ್‌ಪೋರ್ಟ್ ಕಂಪೆನಿಗಳ ಬ್ರಾಂಚ್‌ಗಳನ್ನೇ ಮುಚ್ಚಲಿದ್ದಾರೆ. ದೊಡ್ಡ ಬಿಸಿನೆಸ್‌ಗಳೆಲ್ಲ ಒಂದೊಂದಾಗಿ ಕೇರಳದಿಂದ ಹೊರಗೆ ಹೋಗುತ್ತವೆ. ಚಹಾಪುಡಿ ಬಿಸಿನೆಸ್ ನೋಡಲಿಲ್ಲವೇ? ಇಲ್ಲಾದರೋ ಹೊಸ ಫ್ಯಾಕ್ಟರಿಗಳೊಂದೂ ಬರುತ್ತಿಲ್ಲ. ಸ್ವಲ್ಪ ಬಿಸಿನೆಸ್ ಇದೆ. ಅದಕ್ಕೋಸ್ಕರ ಎಲ್ಲಾ ಟ್ರಾನ್ಸ್‌ಪೋರ್ಟ್ ಕಂಪೆನಿಗಳೂ ಪೈಪೋಟಿ ನಡೆಸಿವೆ. ಇನ್ನು ಎಲ್ಲ ಸಾಮರ್ಥ್ಯದಂತೆ. ಬೆನ್ನು ಹತ್ತಿದರೆ ಸ್ವಲ್ಪ ಬಿಸಿನೆಸ್ ಸಿಗುವುದು. ಅದೆಲ್ಲ ಸಾಕೇ?

ಗೋಡೌನ್‌ನ ಬಾಡಿಗೆ, ಟೆಲಿಫೋನ್, ಇಬ್ಬರು ಕೆಲಸಗಾರರ ಸಂಬಳ, ಪ್ರಯಾಣದ ಖರ್ಚು ಎಲ್ಲ ಸೇರಿ ತಿಂಗಳಿಗೆ ಏಳು ಸಾವಿರ ರೂಪಾಯಿಗಳಿಗೂ ಹೆಚ್ಚಾಗುತ್ತದೆ. ತಿಂಗಳಿಗೆ ಒಂದು ಲಕ್ಷದಷ್ಟು ಬಿಸಿನೆಸ್ ಸಿಕ್ಕಿದರೆ ಮಾತ್ರ ಚಕ್ರ ತಿರುಗುತ್ತದೆ.

ಬೇರೆ ಕೆಲಸಗಾರರಿಲ್ಲದುದರಿಂದ ಬುಕ್ಕಿಂಗ್‌ನಿಂದ ಹಿಡಿದು ಏರಿಸಿ ಇಳಿಸುವುದರ ವರೆಗೆ ಎಲ್ಲ ಕೆಲಸಗಳನ್ನೂ ನಾನೇ ಗಮನಿಸಬೇಕು. ಈಗ ಪ್ಯೂನ್‌ಗೆ ಬುಕ್ಕಿಂಗ್ ಕಲಿಸಿದ್ದೆ. ಆದ್ದರಿಂದ ಸ್ವಲ್ಪ ಸಮಾಧಾನವಿದೆ. ಆ ವೇಳೆಯಲ್ಲಿ ಯಾರನ್ನಾದರೂ ಕಂಡು ಬಿಸಿನೆಸ್ ಪಡೆಯಲು ಯತ್ನಿಸಬಹುದು. ಲಾರಿಗಳು ಬರುವುದು ಹೆಚ್ಚಿನಂತ ರಾತ್ರಿಗಳಲ್ಲಿ. ಕೆಲವು ಸಲ ಆಗಲೇ ಇಳಿಸಲೂ ಬೇಕು. ಆ ರಾತ್ರಿ ನಿದ್ರೆ ಇಲ್ಲ ಎಂದರ್ಥ.

ಇವೆಲ್ಲವೆ ನನ್ನ ಅದೃಷ್ಟ ವಿಶೇಷಗಳು. ಅದರ ಮಧ್ಯವೇ ಲಾಟರಿಯವನು ಬಂದು ಟಿಕೆಟ್ ಹಾಕಲು ನೋಡುತ್ತಿದ್ದಾನೆ. ಆದರೆ ಒಂದು ಕಾಲಿಲ್ಲದ ಆ ಮನುಷ್ಯನ ದಯನೀಯ ಮುಖ ನನ್ನನ್ನು ಕಂಗೆಡಿಸಿತು. ಆತನೂ ಅದೃಷ್ಟ ದೇವತೆಯ ಮಡಿಲಲ್ಲಲ್ಲ ಕುಳಿತಿರುವುದು ಎಂಬ ವಿಷಯ ನನಗೆ ಗೊತ್ತಾಯಿತು. ಆದರೆ ಆತನ ದೌರ್ಭಾಗ್ಯ ಎಷ್ಟರದು ಎಂದು ಆತ ಹೇಳಿದಾಗಲಷ್ಟೆ ಗೊತ್ತಾಗಿದ್ದು. ನನ್ನ ಅದೃಷ್ಟಹೀನತೆಯನ್ನು ಆತನದರೊಂದಿಗೆ ಹೋಲಿಸಿದರೆ ಸೌಭಾಗ್ಯ ಎಂದೇ ಹೇಳಬೇಕಾದೀತು.

ಆತ ಪುನಃ ಬಂದ. ಬುಧವಾರ ಬೆಳಗ್ಗೆ ನಾನು ಆಫೀಸಿಗೆ ಹೋಗಲು ಬಾಗಿಲು ತೆರೆದೆ. ಆತ ಗೋಡೆಯಾಚೆ ಕಾದು ನಿಂತಿದ್ದಾನೆ. ನನ್ನನ್ನು ಕಂಡಾಗ ಆತ ನಕ್ಕ. ದಯನೀಯವಾದ ನಗು. ಸಂತೋಷದಿಂದಿರುವ ನಗುವಲ್ಲ. ಕೇವಲ ಪ್ರತೀಕ್ಷೆಯ ನಗುವಷ್ಟೆ.

ಸರ್ ಒಂದು ಟಿಕೆಟ್ ತಗೋಳಿ. ನಾಳೆಯೇ ಡ್ರಾ. ಕಳೆದ ವಾರ ನಾನು ಬೈದು ಓಡಿಸಿದ್ದದರ ಕರೆಯನ್ನು ಆತ ಇರಿಸಿಕೊಂಡಿಲ್ಲ.

ಐದು ರೂಪಾಯಿಕೊಟ್ಟು ಆತನ ಸಹಾಯ ಮಾಡಬೇಕೆಂದು ಬಯಸಿದ್ದೆ. ಆದರೆ, ಹೇಳಿದ್ದು ಅದಕ್ಕೆ ವಿರುದ್ಧವಾಗಿ.

ನನಗೆ ಟಿಕೆಟ್ ಬೇಡ ಎಂದು ಹೇಳಲಿಲ್ಲವೇ?

ಆತನ ಮುಖ ಮಂಕಾಯಿತು.

ಸಾರ್ ಒಂದು ಟಿಕೆಟ್ ತಗೊಂಡು ಸಹಾಯ ಮಾಡಿ. ತಮ್ಮಂಥವರೊಡನಲ್ಲದೆ ಬೇರೆ ಯಾರಲ್ಲಿ ನಾನು ಕೇಳೋದು?

ಲೋ, ನನಗೆ ಅದೃಷ್ಟವಿಲ್ಲ. ಏನೂ ಸಿಗೋದಿಲ್ಲ ಅಂತ ಗೊತ್ತಿದ್ದೂ ಯಾಕೆ ಐದು ರೂಪಾಯಿ ಕಳೆದುಕೊಳ್ಳೋದು?

ಅದೃಷ್ಟ ಯಾವಾಗ ನಮ್ಮ ಕಡೆ ಬರುತ್ತೆ ಅಂತ ಹೇಳೋಕಾಗಲ್ಲ ಸಾರ್. ಒಂದು ಟಿಕೆಟ್ ತಗೊಂಡು ನೋಡಿ. ಮಿನಿ ಬಂಪರ್, ಹತ್ತು ಲಕ್ಷ ರೂಪಾಯಿ ಮತ್ತು ಮಾರುತಿ ಕಾರು...

ನನಗೆ ಬೇಡ ಗುರು.

ಸಾರ್, ಇದರಿಂದಾನೇ ನಾವು ಬದುಕ್ತಿರೋದು. ಸಾರ್ ಸ್ವಲ್ಪ ಸಹಾಯಮಾಡಿ. ಇನ್ನು ಹತ್ತೇ ಟಿಕೆಟ್ ಉಳಿದಿರೋದು.

ನಾನು ಒಂದು ಹೊಸ ಕಸ್ಟಮರ್‌ಅನ್ನು ಭೇಟಿಯಾಗಲು ಹೊರಟಿದ್ದೆ. ಸಿಗುವುದಾದರೆ ಒಳ್ಳೆಯ ಬಿಸಿನೆಸ್. ಶುಭ ಕಾರ್ಯಕ್ಕೆ ಹೊರಡುವಾಗ... ನನ್ನೊಳಗೆ ನಿದ್ರಿಸುತ್ತಿದ್ದ ವಿಶ್ವಾಸಗಳು ಎಚ್ಚೆತ್ತವು. ಜೇಬಿನಿಂದ ಐದು ರೂಪಾಯಿಯ ನೋಟ್ ತೆಗೆದು ನಾನವನಿಗೆ ನೀಡಿದೆ. ಅದನ್ನು ಪಡೆದು ಹಣೆಯ ಮೇಲೆ ಒತ್ತಿಹಿಡಿದು ಆತ ಕಣ್ಮುಚ್ಚಿದ. ನಂತರ ನೋಟನ್ನು ಜೇಬಿಗೆ ಹಾಕಿ ಒಂದು ಟಿಕೆಟ್ ತೆಗೆದು ನನ್ನೆದುರಿಗೆ ಚಾಚಿದ.

ಇದರಲ್ಲಿ ಯಾವುದಾದರೂ ಒಂದು ಬಹುಮಾನ ಹೊಡೆಯುತ್ತೆ ಸಾರ್.

ಆತ ಕುಂಟುತ್ತ ನಡೆದು ಹೋದ.

NEXT PAGE

ನಾನು ಆತನನ್ನು ಮತ್ತೆ ಕಾಣಲಿಲ್ಲ. ಅಷ್ಟೇ ಅಲ್ಲ ಕೆಲಸದ ಗಡಿಬಿಡಿಯಲ್ಲಿ ಮರೆತೂಬಿಟ್ಟೆ. ಬಿಸಿನೆಸ್ ಚೆನ್ನಾಗಿ ಆಗತೊಡಗಿತ್ತು. ಮ್ಯಾನೇಜ್‌ಮೆಂಟ್ ತನ್ನ ವಾಗ್ದಾನಗಳನ್ನೆಲ್ಲ ನೆರವೇರಿಸಿತು. ಒಂದು ಮನೆ ತೆಗೆಸಿಕೊಟ್ಟಿತು. ಸಂಬಳ ಹೆಚ್ಚಿಸಿತು. ಇನ್ನು ನಾನು ಮದುವೆಯಾಗಬಹುದು. ಹೆಚ್ಚು ಕಷ್ಟವಿಲ್ಲದೆ ಜೀವನ ನಡೆಸಬಹುದು. ಆದರ ನಡುವೆ ನಾನು ಅಲಿಯನ್ನು, ನನಗೆ ಅದೃಷ್ಟ ತಂದವನನ್ನು ನೆನೆಯಲು ಕಾರಣ ಅವನ ಹಾಗೆಯೇ ಒಬ್ಬನನ್ನು ಕಂಡದ್ದು. ಒಂದು ಕಾಲಿಲ್ಲ. ಊರುಗೋಲುಗಳ ಆಧಾರದಿಂದ ನಿಂತಿದ್ದ. ಬೆನ್ನು ತಿರುಗಿಸಿ ನಿಂತಿದ್ದ. ನಾನು ಸ್ಕೂಟರ್ ಓಡಿಸಿಕೊಂಡು ಹೋಗುತ್ತಿದ್ದೆ.

ಆತ ಅಲಿಯೇ ಆಗಿದ್ದ. ನಾನು ಅವನನ್ನು ಮತ್ತೆ ಕಂಡೆ. ಟ್ರಾನ್ಸ್‌ಪೋರ್ಟ್ ಸ್ಟ್ಯಾಂಡ್‌ನಲ್ಲಿ ಹೊರಟುನಿಂತ ಬಸ್‌ನಲ್ಲಿ ಒಂದು ಬದಿಯಲ್ಲಿ ನಾನು ಕುಳಿತಿದ್ದೆ. ಇದ್ದಕ್ಕಿದ್ದಂತೆ ಆ ಶಬ್ದ ಬಸ್ಸಿನ ಹಿಂದಿನಿಂದ ಕೇಳಿ ಬಂತು.

ಸಾರ್, ಕಾಲಿಲ್ಲದವನಿಗೆ ಸಹಾಯ ಮಾಡ್ರೀ ಸಾರ್.

ನನ್ನಿಂದ ನಂಬಲಾಗಲಿಲ್ಲ. ಅಲ್ಲ ಅದು ಅಲಿ ಆಗಿರಲು ಸಾಧ್ಯವಿಲ್ಲ. ನಾನು ತಿರುಗಿನೋಡಲು ಹೆದರಿದೆ. ಅದೇ ಧ್ವನಿ. ನನಗೆ ತಿರುಗಿ ನೋಡುವ ಆಗತ್ಯವಿರಲಿಲ್ಲ. ಅವನು ಬಸ್ಸಿನ ಹಿಂದೆ ಒಬ್ಬೊಬ್ಬರ ಎದುರಿಗೂ ಕೈಚಾಚುವುದನ್ನು ಮನದಲ್ಲಿ ಕಂಡೆ. ಆಗದು. ಆ ಬಗ್ಗೆ ಯೋಚಿಸಲೂ ಆಗದು. ನಾನು ಕಣ್ಮುಚ್ಚಿ ಕುಳಿತೆ. ಅಲಿ ಹತ್ತಿರ ಬರುತ್ತಿದ್ದ. ನಾನು ಕುಳಿತಿದ್ದ ಸಾಲನ್ನು ತಲುಪಿ ಅಲಿ ಹೇಳುತ್ತಿದ್ದ.

ಸಾರ್, ಕಾಲಿಲ್ಲದವನು... ಸಹಾಯ ಮಾಡ್ರೀ ಸಾರ್.

ನಾನು ಜೇಬಿನಲ್ಲಿ ಹುಡುಕಿ ಒಂದು ನೋಟ್ ತೆಗೆದೆ. ಹತ್ತು ರೂಪಾಯಿ ಸಿಕ್ಕಿತು. ಅದನ್ನು ಅವನ ಕಡೆಗೆ ಚಾಚಿದೆ.

ಆಗಲೇ ಆತ ನನ್ನ ಮುಖವನ್ನು ನೋಡಿದ್ದ. ನಾನೂ ಅಲಿಯ ಮುಖವನ್ನು ಕಂಡೆ. ನಮ್ಮ ಕಣ್ಣುಗಳು ಸಂಧಿಸಿದವು. ಆತ ತಿರುಗಿ ನಿಂತ. ಒಂದು ನಿಮಿಷ ಮಾತ್ರ. ಆತನ ಕಣ್ಣುಗಳಲ್ಲಿ ಕಣ್ಣೀರು ಉಕ್ಕಿಬಂತು. ನಾನು ಚಾಚಿದ ನೋಟನ್ನು ಪಡೆಯದೆ, ಒಂದಕ್ಷರ ನುಡಿಯದೆ ಆತ ಹಿಂದಿರುಗಿ ನಡೆದ. ಊರುಗೋಲನ್ನು ಬಲವಾಗಿ ಒತ್ತಿ ಹಿಡಿದು ವೇಗವಾಗಿ ಆತ ನಡೆದ

ನಾನು ಕರೆದೆ.

ಅಲೀ...

ಆತ ತಿರುಗಿ ನೋಡಲಿಲ್ಲ.

BACK TO THE MAIN PAGE